**ದಿಃ 27.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ತೀರ್ಪು ಋಣಿದಾರರ (ಬಿ)(ಡಿ)(ಇ)(ಎಫ್) ಪರ ಶ್ರೀ ಎಂ ಎ ಎನ್ ವಕೀಲರಿಂದಃ –**

ನನ್ನ ಮದುವೆ 2012 ರಲ್ಲಿ ಆಗಿರುತ್ತದೆ. ನನ್ನ ಮದುವೆ ಗದುಗಿನ ಶಿವಾನಂದ ಕಲ್ಯಾಣ ಮಂಟಪದಲ್ಲಿ ಆಗಿದೆ ಎಂದರೆ ಸರಿ. ನನ್ನ ಹೆಂಡತಿಯ ಹೆಸರು ಡಾಃ ಶಕುಂತಲಾ ಎಂದರೆ ಸರಿ. ನಿಮ್ಮ ಹೆಂಡತಿಯ ತಂದೆಯ ಹೆಸರು ಅಂದಾನ ಗೌಡ ಶೇಖರ ಗೌಡ ಎಂದರೆ ಸರಿ. ನಿ ಪಿ 6 ನ್ನು ಸಾಕ್ಷಿಗೆ ತೋರಿಸಿ ಸದರಿ ನಿ ಪಿ 6 ನಿಮ್ಮ ಮದುವೆಯ ಆಮಂತ್ರಣಾ ಪತ್ರಿಕೆ ಎಂದರೆ ಸರಿಯಲ್ಲ ಎನ್ನುತ್ತಾರೆ ಯಾವ ಆಧಾರದ ಮೇಲೆ ನಿ ಪಿ 6 ನ್ನು ನಿಮ್ಮ ಮದುವೆಯ ಆ ಮಂತ್ರಣ ಪತ್ರಿಕೆ ಅಲ್ಲಾ ಎಂದು ಹೇಳುತ್ತೀರಿ ಎಂದರೆ ನಮ್ಮದು ಬೇರೆ ಇದೆ ನಿ ಪಿ 6 ಅಲ್ಲಾ ಎನ್ನುತ್ತಾರೆ. ನಿಮ್ಮ ಮದುವೆಯ ಆಮಂತ್ರಣ ಪತ್ರಿಕೆಯನ್ನು ನೀವು ಈ ಜಾರಿ ಅರ್ಜಿಯಲ್ಲಿ ಹಾಜರುಪಡಿಸಿದ್ದೀರಾ ಎಂದರೆ ಇಲ್ಲಾ ಎನ್ನುತ್ತಾರೆ. ನಿ ಪಿ 6 ರಲ್ಲಿ ತಮ್ಮ ಆಗಮನಾಭಿಲಾಶಿಗಳು ಶ್ರಿ ಎನ್ ಜಿ ನಾಗೇಂದ್ರಪ್ಪ, ಶ್ರೀಮತಿ ಲಲಿತಮ್ಮ ಶ್ರೀಮತಿ ರತ್ನಮ್ಮ ಮತ್ತು ಮಕ್ಕಳಾದ ಅಶ್ವಿನಿ, ರಾಜೇಶ್ವರಿ, ಅಮೃತ ವರ್ಷಿಣಿ ಮತ್ತು ಸರೋಜಮ್ಮ ಅಂದಾನಗೌಡ ಪಾಟೀಲ್ ಎಂದು ಬರೆದಿರುವ ಕಾರಣ ನಿ ಪಿ 6 ನನ್ನದಲ್ಲಾ ಎಂದು ಹೇಳುತ್ತಿರಾ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ತಾಯಿಯ ಹೆಸರು ಸರೋಜಮ್ಮ ಎಂದರೆ ಸರಿ. ನಿಮಂ ತಂದೆಯವರು ಬದುಕಿದ್ದಾಗ ಉಚ್ಚಂಗಿ ದುರ್ಗದಲ್ಲಿ ಮನೆ ಕಟ್ಟಿದ್ದರು ಎಂದರೆ ಸರಿಯಲ್ಲ ನಾನೇ ಕಟ್ಟಿಸಿರುತ್ತೇನ. ಎನ್ನುತ್ತಾರೆ. ನಿಮ್ಮ ತಂದೆಯವರು ಕಟ್ಟಿಧ ಮನೆಯನ್ನು ಮಾತೃಸ್ಮೃತಿ ಎಂದು ಹೆಸರು ಇಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನೇ ಕಟ್ಟಿದ ಮನೆಗೆ ಮಾತೃಸ್ಮೃತಿ ಎಂದು ಹೆಸರು ಇಟ್ಟಿರುತ್ತಾರೆ ಎನ್ನುತ್ತಾರೆ. ನಿಮ್ಮ ತಂದೆಯವರು ಕಟ್ಟಿದ ಮನೆಗೆ ಮಾತೃಸ್ಮೃತಿ ಹೆಸರು ಇಟ್ಟಿದ್ದರೂ ಕೂಡ ನಾನೇ ಕಟ್ಟಿ ಹೆಸರು ಇಟ್ಟಿದ್ದೇನೆಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ನಿ ಪಿ 7 ನ್ನು ಸಾಕ್ಷಿಗೆ ತೋರಿಸಿ ನಿ ಪಿ 7

ಅಮಲ್ಜಾರಿ ಸಂಖ್ಯೆ 11/2014

ಪಿ.ಡಬ್ಲ್ಯೂ-2

ನಿಮ್ಮ ಮಾತೃಶ್ರುತಿ ಮನೆಯ ಗೃಹ ಪ್ರವೇಶದ ಆಮಂತ್ರ ಣ ಪತ್ರಿಕೆ ಎಂದರೆ ಸರಿಯಲ್ಲಾ ಎನ್ನುತ್ತಾರೆ ನಿಮ್ಮ ಮನೆಯ ಗೃಹಪ್ರಶೇದ ಆಮಂತ್ರ ಣ ಪತ್ರಿಕೆಯಲ್ಲಿ ತಮ್ಮ ಆಗಮನಾಭಿಲಾಶಿಗಳು ಎನ್ ಜಿ ನಾಗೇಂದ್ರಪ್ಪ ನೀವೃತ್ತಿ ಪ್ರಾಂಶುಪಾಲರು ಉಚ್ಚಂಗಿ ದುರ್ಗ, ಶ್ರಿಮತಿ ಲಲಿತಮ್ಮ ನಾಗೇಂದ್ರಪ್ಪ, ಶ್ರೀಮತಿ ರತ್ನಮ್ಮ ನಾಗೇಂದ್ರಪ್ಪ, ಡಾಃ ಅಶೋಕ ಎನ್ ನಂಜನಗೌಡರ್, ಅಶ್ವಿನಿ, ರಾಜೇಶ್ವರಿ, ಅಮೃತ ವರ್ಷಿಣಿ ನಂಜನಗೌಡರ್ ಎಂದು ಬರೆದಿರುವುದನ್ನು ಒಪ್ಪಿಕೊಳ್ಳಬೇಕೆಂದು ನಿ ಪಿ 7 ನ್ನು ನಮ್ಮ ಗೃಹ ಪ್ರವೇಶದ ಆಮಂತ್ರ ಣಾ ಪತ್ರಿಕೆ ಅಲ್ಲಾ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ

ನಿಮ್ಮ ಮನೆಯ ಗೃಹ ಪ್ರವೇಶದ ಆಮಂತ್ರ ಣಾ ಪತ್ರಿಕೆಯಲ್ಲಿ ಈ ಜಾರಿ ಅರ್ಜಿಯಲ್ಲಿ ಹಾಜರುಪಡಿಸಿದ್ದೀರಾ ಎಂದರೆ ಇಲ್ಲಾ. ನಾನು 1 ನೇ ತರಗತಿಯನ್ನು ಸಿಂಧನೂರಿನಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಎಲ್ ಕೆ ಜಿ ಯು ಕೆ ಜಿ ಓದಿದ್ದೇನೋ ಇಲ್ಲವೋ ಗೊತ್ತಿಲ್ಲಾ. 1 ನೇ ತರಗತಿಗೆ ನನ್ನನ್ನು ನನ್ನ ತಂದೆಯವರೇ ಪ್ರವೇಶ ಮಾಡಿಸಿರುತ್ತಾರೆ. ನಿಮ್ಮ ಹೆಸರು ಪ್ರವೇಶ ಪತ್ರದಲ್ಲಿ ಏನೆಂದು ಬರೆಸಿದ್ದಾರೆ ಎಂದರೆ ಸಾಕ್ಷಿಯು ನನ್ನ ಹೆಸರನ್ನು ಆಗ ಎನ್ ಜಿ ಅಶೋಕ್ ಸಾಮ್ರಾಟ ಎಂದು ಬರೆಸಿರುತ್ತಾರೆ. ನಂತರ ಸಾಮ್ರಾಟ್ ಎನ್ನುವುದನ್ನು ನನ್ನ ಹೆಸರಿನಿಂದ ತೆಗೆಸಿರುತ್ತಾರೆ. 7 ನೇ ತರಗತಿಯವರೆಗೆ ನನ್ನ ಹೆಸರು ಅಶೋಕ್ ಸಾಮ್ರಾಟ್ ಎಂದು ಇತ್ತು ಆ ನಂತರ ಅಶೋಕ ಎನ್ ನಂಜನಗೌಡರ ಎಂದು ಬದಲಾವಣೆ ಆಯಿತು. ಸದರಿ ಹೆಸರನ್ನು ನನ್ನ ತಂದೆಯವರು ಬದಲಾವಣೆ ಮಾಡಿಸಿರುತ್ತಾರೆ.

**(ಮುಂದುವರಿದ ಪಾಟೀ ಸವಾಲಿಗೆ ಎದುರುದಾರರ ಪರವಕೀಲರು ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ.